## ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 230/2017 ಸಿ.ಡಬ್ಲ್ಯೂ –07 ಪಿ.ಡಬ್ಲ್ಯೂ -06

| | | |
|---|---|---|
| ಹೆಸರು | ಃ | ಸುಗ್ರೀವ್ |
| ತಂದೆಃ ಗಂಡ | ಃ | ಅಣ್ಣಪ್ಪ ಕಾಂಬಳೆ |
| ವಯಸ್ಸು | ಃ | ೫೦ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಬಂಗರಗಾ |

ದಿನಾಂಕಃ೨೨.೧೨.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ರಿಂದ 6, 8 ರಿಂದ 12 ರವರ ಪರಿಚಯ ಇರುತ್ತದೆ.

ಆರೋಪಿ ನಂ.೨ ಮತ್ತು ೩ ರವರ ಮಗನಾದ ಆರೋಪಿ ನಂ.೧ ಚಾಸಾ-೧ ರವರನ್ನು ಹೊಡೆ ಬಡೆ ಮಾಡಿ ತವರು ಮನೆಗೆ ಕಳಿಸಿದ್ದನು. ಈ ಕುರಿತು ನಾವು ಆರೋಪಿ ಪರ 4-5 ಜನ ಹಿರಿಯರು ಪಂಚಾಯಿತಿ ಜರುಗಿಸಿರುತ್ತೇವೆ. ಪಂಚಾಯಿತಿ ಜರುಗಿಸ ನಂತರ ಚಾಸಾ-೧ ರವರನ್ನು ಆರೋಪಿ ನಂ.೧ ರವರ ಜೊತೆ ಬಾಳ್ವೆ ಮಾಡಲು ಆರೋಪಿತರ ಮನೆಗೆ ಕಳಿಸಿದ್ದೆವು. ಪಂಚಾಯತಿಯಲ್ಲಿ ಹೇಳಿದ ಹಾಗೆ ಆರೋಪಿ ನಂ.೧ ಕರೆದುಕೊಂಡು ಹೋಗಿರುತ್ತಾನೆ, ಅಲ್ಲಿ ಒಂದಿಷ್ಟು ದಿನ ಚೆನ್ನಾಗಿದ್ದರು. ನಂತರ ಚಾಸಾ-೧ ರವರು ಹೆರಿಗೆಗೆಂದು ತವರು ಮನೆಗೆ ಬಂದಿರುತ್ತಾರೆ. ಅಲ್ಲಿ ಸಹ ಕೂಡ ಆರೋಪಿ ನಂ.೧ ಬಂದು ಕಿರುಕುಳ ನೀಡಿ ಹೊಡೆ ಬಡೆ ಮಾಡಿರುತ್ತಾನೆ. ಆರೋಪಿ ನಂ.೧ ಚಾಸಾ-೧ ರವರಿಗೆ ರಾಡಿನಿಂದ ಹೊಡೆದು ಕಾಲು ಮುರಿದಿರುತ್ತಾನೆ, ತಲೆಗೆ ಹೊಡೆದಿರುತ್ತಾನೆ, ಕೈಬೆರಳಿಗೆ ಹೊಡೆದು ಮುರಿದಿರುತ್ತಾನೆ. ನಾನೇ ಸ್ವತಃ ಜಗಳವನ್ನು ಬಿಡಿಸಿರುತ್ತೇನೆ. ನಂತರ ಚಾಸಾ-೧ ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಾನು ಈ ರೀತಿ ಹೊಡೆ ಬಡೆ ಮಾಡಿದ ಕಾರಣ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಆರೋಪಿತರು ಚಾಸಾ-೧ ರವರಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡುತ್ತಿದ್ದರು ಎಂದರೆ ಸಾಕ್ಷಿಯು ಮೊದಲು ನೀಡುತ್ತಿದ್ದರು ಪಂಚಾಯತಿ ಮಾಡಿ ಹೇಳಿ ಕಳಿಸಿದ್ದೆವು, ಆದರೂ ಆರೋಪಿ ನಂ.೧ ಬಂದು ಚಾಸಾ-೧ ರವರಿಗೆ ಹೊಡೆ ಬಡೆ ಮಾಡಿ ಕೈ ಕಾಲು ಬೆರಳು ಮುರಿದಿರುತ್ತಾನೆ ಎಂಧರೆ ಸರಿ.

ಸದರಿ ಘಟನೆಯು ದಿ. ೦೯.೦೯.೨೦೧೬ ರಂದು ಆಗಿರುತ್ತದೆ ಎಂಧರೆ ಸರಿ. ಜಗಳ ಬಿಡಿಸಲು ಬಂದ ಚಾಸಾ-೬ ರವರಿಗೂ ಸಹ ಆರೋಪಿ ನಂ.೧ ರಾಡಿನಿಂದ ಬೆನ್ನ ಮೇಲೆ ಹೊಡೆದಿರುತ್ತಾನೆ ಎಂದರೆ ಸರಿ. ಸದರಿ ಜಗಳವನ್ನು ನಾನು, ಚಾಸಾ-೪ ರಿಂದ ೬, ಚಾಸಾ-೯ ರಿಂದ ೧೨ ರವರು ಬಿಡಿಸಿರುತ್ತೇವೆ ಎಂಧರೆ ಸರಿ. ಎಲ್ಲಾ ಆರೋಪಿತರು ಚಾಸಾ-೧ ರವರಿಗೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂಧರೆ ಸರಿ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಎಂ.ಕೆ.ಜಿ./ಬಿ.ಎ.ಡಿ. ವಕೀಲರಿಂದ**

[ ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ